**ಕರ್ನಾಟಕ ಲೋಕಾಯುಕ್ತ**

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಬಿಜಿಎಂ\8685\2015\ಉನಿವಿ-4

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 26/10/2018

**ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ವರದಿ**

**ವಿಷಯ:** ಸರ್ಕಾರಿ ನೌಕರರಾದ ಧಾರವಾಡ ಜಿಲ್ಲೆ ಪಿ.ಬಿ.ರಸ್ತೆ ಕಿಟ್ಟೆಲ್ ವಿಜ್ಞಾನ ಕಾಲೇಜ್ ಪ್ರಭಾರ ಪ್ರಾಂಶುಪಾಲರಾದ ಶ್ರೀಮತಿ.ಸುಶಾಂತಿ ಪ್ರಸನ್ನಕುಮಾರ್ ರವರ ಕರ್ತವ್ಯ ಲೋಪದ ಬಗ್ಗೆ.

**********

ಧಾರವಾಡ ಜಿಲ್ಲೆಯ 1) ಗಾಂಧಿ ನಗರ, ಪಿಬಿ ರಸ್ತೆ, 1ನೇ ಕ್ರಾಸ್, 4ನೇ ಮುಖ್ಯ, ಗುಡ್‌ಶೆಫರ್ಡ್ ಕಾಲೇಜ್ ಶ್ರೀ.ಸುರೇಶ್ ಬೋಯರ್ ಮತ್ತು 2) ಕೋರ್ಟ್ ರಸ್ತೆ, ಕಾಸ್ಮೋಸ್ ಕ್ಲಬ್ ಎದುರು ನೋಟರಿ ಮತ್ತು ವಕೀಲರಾದ ಶ್ರೀ.ಎ.ಎಸ್.ದೇಸಾಯಿ (ಇನ್ನು ಮುಂದೆ "ದೂರುದಾರರು 1 ಮತ್ತು 2" ಎಂದು ಕ್ರಮವಾಗಿ, ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ಧಾರವಾಡ ಜಿಲ್ಲೆ ಪಿ.ಬಿ.ರಸ್ತೆ ಕಿಟ್ಟೆಲ್ ವಿಜ್ಞಾನ ಕಾಲೇಜ್ ಪ್ರಭಾರ ಪ್ರಾಂಶುಪಾಲರಾದ ಶ್ರೀಮತಿ.ಸುಶಾಂತಿ ಪ್ರಸನ್ನಕುಮಾರ್ (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ದುರ್ನಡತೆ \ ಕರ್ತವ್ಯ ಲೋಪದ ಬಗ್ಗೆ ನೀಡಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-** ಎದುರುದಾರರು ಧಾರವಾಡ ಕಿಟೆಲ್ ವಿಜ್ಞಾನ ಕಾಲೇಜಿನ ಪ್ರಭಾರಿ ಪ್ರಾಂಶುಪಾಲರಾಗಿದ್ದು, ಅವರು ಸಂಸ್ಥೆಯ ಸಾರ್ವಜನಿಕ ಮಾಹಿತಿ ಅಧಿಕಾರಿಯಾಗಿದ್ದಾರೆ. ಹೆಚ್‌ಡಿಎಂಸಿ ಕಟ್ಟಡದ ಅನುಮೋದಿತ ನಕ್ಷೆ ಮತ್ತು 3 ಮಹಡಿ ಕಟ್ಟಡದ 2012-13, 2013-14 ಮತ್ತು 2014-15ನೇ ಸಾಲಿನ ಲೆಕ್ಕಪರಿಶೋಧನಾ ತಃಖ್ತೆಯನ್ನು ಕೊಡುವಂತೆ ಮಾಹಿತಿ ಹಕ್ಕಿನಡಿಯಲ್ಲಿ ಅರ್ಜಿಯನ್ನು ಸಲ್ಲಿಸಿದರೂ ಸಹ ಎದುರುದಾರರು ಈ ಬಗ್ಗೆ ಯಾವುದೇ ಮಾಹಿತಿಯನ್ನು ಕೊಡದೇ, ಸದರಿ ಮಾಹಿತಿಗಳು ತಮ್ಮಲ್ಲಿ ಇರುವುದಿಲ್ಲವೆಂದು ಉತ್ತರವನ್ನು ಕೊಟ್ಟಿದ್ದಾರೆ. ಸದರಿ ಕಟ್ಟಡದ ಅನುಮೋದಿತ ನಕ್ಷೆಯನ್ನು ಹೆಚ್‌ಡಿಎಂಸಿ ಯಿಂದ ತಾವು ಪಡೆದುಕೊಂಡಿದ್ದು, ಸದರಿ ಕಟ್ಟಡದ ಅಂದಾಜು ಮೊತ್ತವು 2013ರಲ್ಲಿ ₹1,04,65,000/-

N. Ananda

ಇದೆ. ಆದರೆ, ಸದರಿ ಕಟ್ಟಡ ಮತ್ತು ಲಿಫ್ಟ್ ಹಾಗೂ ಪೀಠೋಪಕರಣಗಳ ಒಟ್ಟು ಮೌಲ್ಯ ₹3ಕೋಟಿಗಿಂತಲೂ ಹೆಚ್ಚಾಗಿದ್ದು, ಈ ವ್ಯವಹಾರದಲ್ಲಿ ಎದುರುದಾರರು ಭ್ರಷ್ಟಾಚಾರ ನಡೆಸಿರುವರೆಂಬ ಸಂಶಯ ಬರುತ್ತದೆಂದು ಹೇಳಿದ್ದಾರೆ.

3. ದೂರಿನ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ–

ಮಹಾವಿದ್ಯಾಲಯದ ಉಪನ್ಯಾಸಕರ ಕಾರ್ಯಭಾರಕ್ಕೆ ಸಂಬಂಧಿಸಿದಂತೆ ಸದರಿಯವರು ಮಾಹಿತಿ ಹಕ್ಕಿನಡಿ ಕೇಳಿದ ಮಾಹಿತಿಯನ್ನು ಪಡೆಯುವುದಕ್ಕಾಗಿ ಕಾರ್ಯಾಲಯಕ್ಕೆ ಬರುವಂತೆ ಸೆಪ್ಟೆಂಬರ್, 2015ರಲ್ಲಿ ತಿಳಿಸಿದ್ದರೂ ಸಹ ಮಹಾ ವಿದ್ಯಾಲಯಕ್ಕೆ ಬಂದಿಲ್ಲ. ಮಾಹಿತಿ ಹಕ್ಕು ಅಧಿನಿಯಮ ಕಲಂ 6ರಡಿ ಭಾರತದ ನಾಗರೀಕರಿಗೆ ನೀಡಿರುವ ಹಕ್ಕನ್ನು ದೂರುದಾರರು ದುರುಪಯೋಗ ಪಡಿಸಿಕೊಂಡು ತಮ್ಮ ದೈನಂದಿನ ಚಟುವಟಿಕೆಗಳಿಗೆ ಅಡ್ಡಿಯನ್ನುಂಟು ಮಾಡುವ ಹವ್ಯಾಸ ಉಳ್ಳವರಾಗಿದ್ದಾರೆ. ಮಾಹಿತಿ ಹಕ್ಕಿನಡಿಯಲ್ಲಿ ಕೇಳಿರುವ ಲಭ್ಯವಿರುವ ಮಾಹಿತಿಯನ್ನು ದೂರುದಾರರಿಗೆ ನೀಡಲಾಗಿದ್ದು, ಸದರಿಯವರಿಗೆ ಇನ್ನು ಹೆಚ್ಚಿನ ಮಾಹಿತಿ ಬೇಕಾದಲ್ಲಿ, ಮಾಹಿತಿ ಹಕ್ಕು ಅಧಿನಿಯಮದ ವ್ಯಾಪ್ತಿಯೊಳಗೆ ಪರಿಹಾರ ಕಲ್ಪಿಸಿಕೊಳ್ಳಬೇಕಾಗುತ್ತದೆ ವಿನಃ ಕಪೋಲಕಲ್ಪಿತರಾಗಿ ತಮ್ಮಲ್ಲಿ ದೂರು ನೀಡಲು ಅವಕಾಶವಿದೆ ಎಂಬ ಕಾರಣಕ್ಕಾಗಿ ಈ ರೀತಿ ಸುಳ್ಳು ದೂರನ್ನು ಸಲ್ಲಿಸಿದ್ದಾರೆ. ಮಹಾವಿದ್ಯಾಲಯದ ಆಂತರೀಕ ವಿಷಯಗಳಲ್ಲಿ ಹಾಗೂ ಸಂಸ್ಥೆಯ ಭದ್ರತೆ ದೃಷ್ಟಿಯಿಂದ ಮಾಹಿತಿ ಹಕ್ಕಿನ ಅಧಿನಿಯಮದಡಿಯಲ್ಲಿ ಮಾಹಿತಿಯನ್ನು ಕೊಡಲು ನಿರಾಕರಿಸಲು ಅವಕಾಶವಿದೆ. ಆದರೆ, ಆ ರೀತಿ ಮಾಡದೇ ಲಭ್ಯವಿರುವ ಮಾಹಿತಿಯನ್ನು ಒದಗಿಸಿರುವುದಲ್ಲದೇ, "ಮಾಹಿತಿ ಲಭ್ಯವಿರುವುದಿಲ್ಲ" ಎಂಬ ಮಾಹಿತಿಯನ್ನು ಒದಗಿಸುವುದು ಸಹ ಮಾಹಿತಿ ಆಗಿದೆ ಎಂಬುದನ್ನು ಗಮನಿಸುವಂತೆ ವಿನಂತಿಸುತ್ತಿರುವುದಾಗಿ ಹೇಳಿದ್ದಾರೆ.

4. ಆಕ್ಷೇಪಣೆಗೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ –

ಎದುರುದಾರರು ಸಾರ್ವಜನಿಕರು ಕೇಳಿದ ಮಾಹಿತಿಗಳನ್ನು ನೀಡದೇ ಅನಾವಶ್ಯಕವಾಗಿ ತೊಂದರೆ ನೀಡುತ್ತಿದ್ದಾರೆ. ಎದುರುದಾರರ ವಿದ್ಯಾಲಯದ ಕಟ್ಟಡಕ್ಕೆ ಸಂಬಂಧಪಟ್ಟಂತೆ 2012–13 ರಿಂದ 2014–15ರವರೆಗೆ ಲೆಕ್ಕಪರಿಶೋಧನಾ ವರದಿಯನ್ನು ಕೇಳಿದ್ದು, ಈ ಬಗ್ಗೆ ದಾಖಲೆಗಳನ್ನು ನೀಡಿಲ್ಲ. ಆ ನಂತರ, ತಾವು ಹೆಚ್‌ಡಿಎಂಸಿ ರವರಿಂದ ಎದುರುದಾರರಿಗೆ ಸಂಬಂಧಪಟ್ಟ ವಿದ್ಯಾಲಯದ ಕಟ್ಟಡದ ಖರ್ಚು ₹1,04,65,000/- ಆಗಿದೆ. ಆದರೆ, ಎದುರುದಾರರು ಈ ರೀತಿ ಖರ್ಚಿನ ಬಗ್ಗೆ ನಿಖರ ಮಾಹಿತಿ ನೀಡದೇ ಸುಮಾರು ₹3 ಕೋಟಿಗಿಂತಲೂ ಅಧಿಕ ಖರ್ಚು ಮಾಡಿರುವುದು ದಾಖಲೆಗಳಿಂದ ಕಂಡು ಬಂದಿದೆ. ತಾವು ನಿಬಂಧಕರು (ಪರೀಕ್ಷಾಂಗ), ಧಾರವಾಡ ವಿಶ್ವವಿದ್ಯಾಲಯದವರಿಗೆ ನೀಡಲಾದ ಮನವಿ ಪತ್ರದಲ್ಲಿ ತಮ್ಮ ಸಂಸ್ಥೆ ಆರ್ಥಿಕವಾಗಿ ಬಡ ಸಂಸ್ಥೆಯಾಗಿದೆಯೆಂದು ತಿಳಿಸಿದ್ದು, ಈ ರೀತಿ ಕೋಟ್ಯಾಂತರ ರೂಪಾಯಿ ಬೆಲೆ

N. Anand

B5m/8685/15



ಬಾಳುವ ಕಟ್ಟಡಗಳನ್ನು ನಿರ್ಮಿಸಲು ಯಾವ ಮೂಲಗಳಿಂದ? ಆದಾಯ ಬಂದಿದೆ ಎಂಬುದರ ಬಗ್ಗೆ ಪೂರಕ ದಾಖಲೆಗಳನ್ನು ಹಾಜರುಪಡಿಸಿಲ್ಲ. ಕಾರಣ, ಎದುರುದಾರರ ವಿರುದ್ಧ ಕ್ರಮ ಕೈಗೊಳ್ಳಲು ಕೋರಿದ್ದಾರೆ.

5. ದೂರಿನ ಬಗ್ಗೆ ತನಿಖೆ ಕೈಗೊಂಡು ವರದಿ ಸಲ್ಲಿಸುವಂತೆ ಧಾರವಾಡ ಜಿಲ್ಲೆ ಕರ್ನಾಟಕ ಲೋಕಾಯುಕ್ತ ಆರಕ್ಷಕ ಉಪಾಧೀಕ್ಷಕ (ಇನ್ನು ಮುಂದೆ, 'ತನಿಖಾಧಿಕಾರಿಗಳು' ಎಂದು ಕರೆಯಲ್ಪಡುತ್ತಾರೆ) ರನ್ನು ಕೇಳಲಾಗಿ, ಸದರಿಯವರು ತಮ್ಮ ತನಿಖಾ ವರದಿಯಲ್ಲಿ –

1) ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ, ಧಾರವಾಡ ರವರಿಂದ ಸದರಿ ಮಹಾವಿದ್ಯಾಲಯದವರು ಕಟ್ಟಡ ಕಟ್ಟಲು ಮಂಜೂರಾತಿ ಪಡೆದುಕೊಂಡ ಕಟ್ಟಡದ ನೀಲಿ ನಕ್ಷೆಗೂ, ಸದ್ಯ ಕಟ್ಟುತ್ತಿರುವ ಕಟ್ಟಡದ ವಿನ್ಯಾಸಕ್ಕೂ ಹೋಲಿಕೆಯಾಗದೇ, ವ್ಯತಿರಿಕ್ತವಾಗಿ ಕಂಡು ಬರುತ್ತಿದ್ದು, ಕಟ್ಟಡದ ಪರವಾನಗಿ ನಿಯಮಗಳನ್ನು ಉಲ್ಲಂಘನೆ ಮಾಡಿರುವುದು ಕಂಡು ಬಂದಿದೆ;

2) ಮಹಾನಗರ ಪಾಲಿಕೆಯಿಂದ ಕಟ್ಟಡ ನಿರ್ಮಾಣದ ಪರವಾನಗಿ ಪಡೆಯುವಾಗ ಕಟ್ಟಡ ನಿರ್ಮಾಣಕ್ಕೆ ಅಂದಾಜು ವೆಚ್ಚ ₹1,04,65,000/– ವ್ಯಯಿಸುವುದಾಗಿ ತೋರಿಸಿದ್ದು, ಆದರೆ ಅಂದಾಜು ಪಟ್ಟಿಯಲ್ಲಿ ಕೇವಲ ನೆಲ ಮಹಡಿ ಕಟ್ಟುವ ಅಂದಾಜು ವೆಚ್ಚವೇ ₹1,42,58,210/– ಆಗುತ್ತದೆಂದು ಹೇಳಿದ್ದಾರೆ. ಮುಂದುವರೆದು, ಈವರೆವಿಗೂ ಕಟ್ಟಡ ಕಟ್ಟಲು ₹2,25,00,000/– ಖರ್ಚಾಗಿದೆಯೆಂದು ಎದುರುದಾರರು ವರದಿ ನೀಡಿದ್ದಾರೆ;

3) ಸದರಿ ಮಹಾವಿದ್ಯಾಲಯದ 2011–12 ರಿಂದ 2015–16ರ ಆಡಿಟ್ ವರದಿಗಳಲ್ಲಿ ಕಾಲೇಜಿನಲ್ಲಿ ದೃಢೀಕರಣವಾದ ಒಟ್ಟು ಹಣದಲ್ಲಿ ಪ್ರತ್ಯೇಕವಾಗಿ ಕಟ್ಟಡದ ಕಾಮಗಾರಿಗೆ ಬಳಸಿದ ಮೊತ್ತ ₹1,88,62,253/– ಎಂದು ತಿಳಿದು ಬಂದಿದೆ. ಸದರಿ ಕಟ್ಟಡದ ಸದ್ಯದ ಮೌಲ್ಯಮಾಪನ ಮಾಡಿಸಿದ್ದಲ್ಲಿ, ನಿರ್ಮಾಣಕ್ಕೆ ವ್ಯಯಿಸಿದ ಮೊತ್ತ ₹2,94,16,957/– ಆಗುತ್ತದೆಂದು ಲೋಕೋಪಯೋಗಿ ಇಲಾಖೆಯವರ ವರದಿಯಿಂದ ತಿಳಿದು ಬಂದಿದೆ;

4) ಲೆಕ್ಕಪರಿಶೋಧನಾ ವರದಿಯಲ್ಲಿ ತೋರಿಸಿರುವ ಕಟ್ಟಡ ಕಟ್ಟುವ ಕಾಮಗಾರಿಗೆ ಎಂದು ಬಳಸಿದ ಹಣ ₹1,88,62,253/–ಗಳನ್ನು ಸದ್ಯದ ಹಂತದವರೆಗಿನ ಸದರಿ ಕಟ್ಟಡದ ನಿರ್ಮಾಣಕ್ಕೆ ತಗುಲಿದ ಮೌಲ್ಯಮಾಪನದ ಮೊತ್ತ ₹2,94,16,957/–ರಲ್ಲಿ ಕಳೆಯಲಾಗಿ ₹1,05,54,704/– ಆಗುತ್ತಿದ್ದು, ಸದರಿ ಹೆಚ್ಚಿಗೆ ಹಣವನ್ನು ಕಟ್ಟಡ ಕಾಮಗಾರಿಗೆ ದಾಖಲಾತಿಗಳಿಲ್ಲದೆ ಖರ್ಚು ಮಾಡಿರುವುದು ಕಂಡು ಬರುತ್ತದೆಂದು ಹೇಳಿದ್ದಾರೆ.

N. Anand.

6. ತನಿಖಾಧಿಕಾರಿಗಳ ವರದಿಗೆ ಎದುರುದಾರರಿಂದ ಉತ್ತರವನ್ನು ಕೇಳಲಾಗಿ, ಎದುರುದಾರರು ತಮ್ಮ ಉತ್ತರದಲ್ಲಿ –

ಕಿಟೆಲ್ ವಿಜ್ಞಾನ ಮಹಾವಿದ್ಯಾಲಯವು ಸರ್ಕಾರದಿಂದ ಅನುದಾನ ಪಡೆಯುವ ಸಂಸ್ಥೆಯಾಗಿದ್ದು, ಕಟ್ಟಡವನ್ನು ಕಟ್ಟಲು ಸರ್ಕಾರದಿಂದ ಅಥವಾ ಯುಜಿಸಿ ಯಿಂದ ಕಟ್ಟಡ ನಿಧಿ/ ಬಂಡವಾಳ / ಹಣವನ್ನು ಪಡೆದಿಲ್ಲ. ಹೀಗಿರುವಾಗ ಬಂಡವಾಳದ ದುರುಪಯೋಗದ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಪದವಿ ಹಾಗೂ ಪದವಿ ಪೂರ್ವ ವಿದ್ಯಾರ್ಥಿಗಳಿಂದ ಮಹಾವಿದ್ಯಾಲಯಕ್ಕೆ ಬಂದ ಹಣದಿಂದಲೇ ಕಟ್ಟಡವನ್ನು ಕಟ್ಟುತ್ತಿದ್ದು, ಪ್ರತಿ ವರ್ಷವೂ ಹಂತ ಹಂತವಾಗಿ ಕೆಲಸವನ್ನು ಮಾಡಿದೆ. ಕಟ್ಟಡ ನಿರ್ಮಾಣಕ್ಕೆ ಪಾಲಿಕೆಯಿಂದ ಮಂಜೂರಾತಿ / ಪರವಾನಗಿ ಪಡೆಯುವ ಮೊದಲೇ ಕಟ್ಟಿದ್ದ 4–5 ಕಟ್ಟಡಗಳ ಶುಲ್ಕ ಭರಿಸಿ, ಪ್ರಮಾಣ ಪತ್ರವನ್ನು ಪಡೆಯಲಾಗಿದೆ. 2011ರಲ್ಲಿ ಕಟ್ಟಡದ ನೀಲಿ ನಕ್ಷೆಯನ್ನು ತಯಾರಿಸಿ, ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯಿಂದ ಪರವಾನಗಿಯನ್ನು ಪಡೆದಿದ್ದು, ಪರವಾನಗಿಗೆ ಅನುಗುಣವಾಗಿ ಕಟ್ಟಡದ ಕಾಮಗಾರಿ ಕೈಗೊಂಡಿದೆ. ಕಟ್ಟಡದ ಕೆಲಸ ಇನ್ನೂ ಬಾಕಿ ಇರುವುದರಿಂದ, ಬದಲಾವಣೆ ಮಾಡಬೇಕಾದ ಪರಿಸ್ಥಿತಿ ಉದ್ಭವಿಸಿದ್ದಲ್ಲಿ, ಕೆಎಂಸಿ ಕಾಯಿದೆ ಪ್ರಕಾರ ಅದನ್ನು ಬದಲಾಯಿಸಲು ಅವಕಾಶ ಇರುತ್ತದೆ. ಕಟ್ಟಡದ ಕಾಮಗಾರಿಯಲ್ಲಿ ಸರ್ಕಾರದ ಯಾವ ನಿಯಮವನ್ನು ಉಲ್ಲಂಘಿಸಿದೆ? ಎಂದು ಸ್ಪಷ್ಟವಾಗಿ ಹೇಳಿಲ್ಲ. ವಿಚಾರಣಾ ವರದಿಯಲ್ಲಿ 'ದೂರಿನಲ್ಲಿ ಕಾಣಿಸಿದ ಆಪಾದನೆಗಳು ಸಾಬೀತಾಗಿದೆ' ಎಂಬ ಅಂಶವು ಸತ್ಯಕ್ಕೆ ದೂರವಿದೆ. ಲೆಕ್ಕ ಪರಿಶೋಧಕರ ಖರ್ಚು–ವೆಚ್ಚದ ಲೆಕ್ಕವು ಅಪೂರ್ಣವಿದೆ. 2011–12 ರಿಂದ 2015–16ರ ಹಣಕಾಸು ವರ್ಷಗಳ ಲೆಕ್ಕ ಪರಿಶೋಧನಾ ವರದಿಗಳಲ್ಲಿ ಕಟ್ಟಡಕ್ಕೆ ತಗುಲಿದ ವೆಚ್ಚವನ್ನು ತನಿಖಾಧಿಕಾರಿಗಳು ಗಣನೆಗೆ ತೆಗೆದುಕೊಂಡಿದ್ದಾರೆ. 2012 ರಿಂದ 2015ರವರೆಗಿನ 3 ಹಣಕಾಸು ವರ್ಷಗಳಲ್ಲಿ ಕಟ್ಟಡಕ್ಕೆ ತಗುಲಿದ ಖರ್ಚು–ವೆಚ್ಚವನ್ನು ಗಣನೆಗೆ ತೆಗೆದುಕೊಂಡರೆ, ಖರ್ಚು–ವೆಚ್ಚ ಇನ್ನೂ ಕಡಿಮೆಯಾಗುತ್ತದೆ. ತನಿಖಾಧಿಕಾರಿಗಳ ವರದಿಯು ನಿರಾಧಾರ ಮತ್ತು ಸತ್ಯಾಂಶವಿಲ್ಲದ ವರದಿಯಾಗಿದ್ದು, ಹಲವಾರು ನ್ಯೂನತೆಗಳಿಂದ ಕೂಡಿದೆ. ತಮಗೆ ಆಡಳಿತ ಮಂಡಳಿಯವರು ಜೇಷ್ಠತೆಯ ಆಧಾರದ ಮೇಲೆ ಪದೋನ್ನತಿ ನೀಡಿ ಪೂರ್ಣಾವಧಿ ಪ್ರಾಚಾರ್ಯೆ ಎಂದು ಆದೇಶ ನೀಡಿ ಮಹಾವಿದ್ಯಾಲಯದ ಎಲ್ಲಾ ಕೆಲಸಗಳನ್ನು ನಿರ್ವಹಿಸಲು ಅಧಿಕಾರ ನೀಡಿದ್ದಾರೆ. ಆದಾಗ್ಯೂ, ಕಾಲೇಜು ಶಿಕ್ಷಣ ಇಲಾಖೆಯವರು ತಮಗೆ ಪ್ರಭಾರಿ ಪ್ರಾಚಾರ್ಯೆ ಎಂದು ಅನುಮೋದನೆ ನೀಡಿ, ಕಾರ್ಯಾಭಾರವನ್ನು ದೈನಂದಿನ ಚಟುವಟಿಕೆಗಳಿಗೆ ಸೀಮಿತಗೊಳಿಸಿದ್ದಾರೆ. ಕಟ್ಟಡ ಕಾಮಗಾರಿ ಪೂರ್ಣಗೊಂಡ ಮೇಲೆ ಮಹಾನಗರ ಪಾಲಿಕೆಗೆ ಮುಕ್ತಾಯ ಪ್ರಮಾಣಕ್ಕೆ ಅರ್ಜಿ ಸಲ್ಲಿಸುವಾಗ ಕಟ್ಟಡಕ್ಕೆ ತಗುಲಿದ ಸಂಪೂರ್ಣ ಖರ್ಚು–ವೆಚ್ಚವನ್ನು ನೀಡಲಾಗುವುದು. ವಿಚಾರಣಾಧಿಕಾರಿಗಳು ನೀಡಿರುವ ವರದಿಯನ್ನು ಪ್ರಶ್ನಿಸಲು ತಮಗೆ ಕಾನೂನಿನಡಿಯಲ್ಲಿ ಅವಕಾಶವಿದ್ದು, ಮುಂದಿನ ದಿನಗಳಲ್ಲಿ ಸದರಿ ವರದಿಯನ್ನು ಉಚಿತವಾದ ವಾದ ಸ್ಥಾನದಲ್ಲಿ ಪ್ರಶ್ನಿಸುವ ಹಕ್ಕನ್ನು ಎದುರುದಾರರು ಕಾಯ್ದಿರಿಸಿಕೊಂಡಿರುವುದಾಗಿ ಹೇಳಿದ್ದಾರೆ.

BGM/8685/15



7. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

1) ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್ ನಂ.15, ಸಿಟಿಎಸ್ ನಂ.121ರಲ್ಲಿ ಶೈಕ್ಷಣಿಕ ಕಟ್ಟಡ (ನೆಲಮಹಡಿ+3) ಪರವಾನಗಿ ಮಂಜೂರು ಮಾಡಲು ಕೋರಿ ಪ್ರಾಂಶುಪಾಲರು ಕಿಟೆಲ್ ವಿಜ್ಞಾನ ಮಹಾವಿದ್ಯಾಲಯ, ಧಾರವಾಡ (ಎದುರುದಾರರು) ದಿ:06/12/12ರಂದು ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಗೆ ಅರ್ಜಿಯನ್ನು ಸಲ್ಲಿಸಿ ದಿ:21/12/12ರಂದು ಕಟ್ಟಡ ಪರವಾನಗಿಯನ್ನು ಪಡೆದುಕೊಂಡಿದ್ದಾರೆ;

2) ಸದರಿ ಶೈಕ್ಷಣಿಕ ಸಂಸ್ಥೆಯು ತಮ್ಮ ಖಾಸಗಿ ಲೆಕ್ಕಪರಿಶೋಧಕರಿಗೆ ನೀಡಿದ 2011-12 ರಿಂದ 2015–16 ರವರೆಗಿನ ಲೆಕ್ಕ ಪುಸ್ತಕಗಳನ್ನು ಪರಿಶೀಲಿಸಿ ನೀಡಿದ ಖಾಸಗಿ ಲೆಕ್ಕಪರಿಶೋಧನಾ ವರದಿಯ ಪ್ರಕಾರ ಕಿಟೆಲ್ ವಿಜ್ಞಾನ ಮಹಾವಿದ್ಯಾಲಯ, ಧಾರವಾಡ ದಲ್ಲಿ ಕ್ರೂಢೀಕರಣವಾದ ಒಟ್ಟು ಹಣದಲ್ಲಿ ₹1,88,62,253/– ಅನ್ನು ಕಟ್ಟಡ ನಿರ್ಮಾಣಕ್ಕೆ ಬಳಸಲಾಗಿದೆಯೆಂದು ಹೇಳಿದೆ. ಸದರಿ ಕಟ್ಟಡದ ಸದ್ಯದ ಹಂತದ ಮೌಲ್ಯಮಾಪನವನ್ನು ಲೋಕೋಪಯೋಗಿ ಇಲಾಖೆಯವರಿಂದ ಮಾಡಿಸಲಾಗಿ, ಕಟ್ಟಡ ನಿರ್ಮಾಣಕ್ಕೆ ವ್ಯಯಿಸಿರುವ ಒಟ್ಟು ಮೊತ್ತ ₹2,94,16,957/– ಆಗುತ್ತದೆಂದು ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಧಾರವಾಡ ವಿಭಾಗ, ಧಾರವಾಡ ರವರು ವರದಿಯನ್ನು ನೀಡಿದ್ದಾರೆ;

3) ಕಟ್ಟಡದ ನೆಲ ಮಹಡಿ ಮತ್ತು ಮೊದಲನೇ ಮಹಡಿಯಲ್ಲಿ ಏಳು ವರ್ಗ ಕೊಠಡಿಗಳು, ಎರಡು ವಿದ್ಯಾರ್ಥಿಗಳ ಕೊಠಡಿಗಳು ಹಾಗೂ ಶೌಚಾಲಯದ ಕೆಲಸ ಪೂರ್ಣಗೊಂಡಿವೆಯೆಂದು ಹಾಗೂ ಎರಡು ಮತ್ತು ಮೂರನೇ ಮಹಡಿಗಳ ಫ್ಲೋರಿಂಗ್ ಮತ್ತು ಪ್ಲಾಸ್ಟರಿಂಗ್ ಹೊರತುಪಡಿಸಿ, ಉಳಿದ ಕೆಲಸ ಬಾಕಿ ಇರುತ್ತದೆಂದು, ಒಟ್ಟಾರೆಯಾಗಿ ಈವರೆವಿಗೂ ₹2,25,00,000/– ಸಂದಾಯವಾಗಿದೆ ಹಾಗೂ ಇಂದಿನವರೆಗೆ ಆದ ಕಾಮಗಾರಿಗೆ ಸುಮಾರು ₹40,00,000/– ಬಾಕಿ ಸಂದಾಯವಾಗ ಬೇಕಿದೆಯೆಂದು ಎದುರುದಾರರು ದಿ:29/07/17ರಂದು ತನಿಖಾಧಿಕಾರಿಗಳಿಗೆ ಮಾಹಿತಿ ಪತ್ರವನ್ನು ನೀಡಿದ್ದಾರೆ;

4) ಮೇಲೆ ಹೇಳಿದ ಲೆಕ್ಕಪರಿಶೋಧಕರ ವರದಿ ಮತ್ತು ಎದುರುದಾರರು ತನಿಖಾಧಿಕಾರಿಗಳಿಗೆ ನೀಡಿದ ದಿನಾಂಕ:29/07/17ರ ಪತ್ರದಲ್ಲಿ ಹೇಳಲಾದ ಕಟ್ಟಡ ನಿರ್ಮಾಣದ ಖರ್ಚಿಗೂ, ಕಟ್ಟಡ ನಿರ್ಮಾಣಕ್ಕೆ ಈವರೆವಿಗೂ ಆದ ಒಟ್ಟಾರೆ ಖರ್ಚಿಗೂ ಸಾಕಷ್ಟು ವ್ಯತ್ಯಾಸ ಕಂಡು ಬರುತ್ತಿದ್ದು, ಒಂದಕ್ಕೊಂದು ತಾಳೆ ಹೊಂದುವುದಿಲ್ಲ. ಕಾಲೇಜಿನಲ್ಲಿ ಕ್ರೂಢೀಕರಣವಾದ ಹಣದಲ್ಲಿ ಕಟ್ಟಡ ಕಾಮಗಾರಿಗೆ ₹1,88,62,253/–ಅನ್ನು ಮಾತ್ರ ಬಳಸಲಾಗಿದೆಯೆಂದು ಖಾಸಗಿ ಲೆಕ್ಕಪರಿಶೋಧಕರ ವರದಿಯಲ್ಲಿ ಹೇಳಲಾಗಿದ್ದು, ಕಟ್ಟಡ ಕಟ್ಟಲು ಈವರೆವಿಗೆ ₹2,25,00,000/– ಖರ್ಚಾಗಿದೆಯೆಂದು ಮತ್ತು ಆದ ಕೆಲಸದ ಬಾಬ್ತು ₹40,00,000/– ಬಾಕಿ ಸಂದಾಯವಾಗಬೇಕೆಂದು ಎದುರುದಾರರು ತನಿಖಾಧಿಕಾರಿಗಳಿಗೆ ಮಾಹಿತಿಯನ್ನು ನೀಡಿದ್ದಾರೆ. ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಧಾರವಾಡ ವಿಭಾಗ ರವರು

N. Anand

ತನಿಖಾಧಿಕಾರಿಯವರಿಗೆ ನೀಡಿದ ಮೌಲ್ಯಮಾಪನ ವರದಿಯನ್ವಯ ಸದರಿ ಕಟ್ಟಡದ ಮೌಲ್ಯಮಾಪನ ₹2,94,16,957/- ಆಗಿದೆ;

5) ಕಿಟೆಲ್ ವಿಜ್ಞಾನ ಮಹಾವಿದ್ಯಾಲಯ, ಧಾರವಾಡ ಈ ಸಂಸ್ಥೆಯು ಸರ್ಕಾರದಿಂದ ಅನುದಾನ ಪಡೆಯುವ ಸಂಸ್ಥೆಯಾಗಿದ್ದು, ಸದರಿ ಸಂಸ್ಥೆಯಲ್ಲಿ ಪ್ರಾಂಶುಪಾಲರು/ಪ್ರಭಾರಿ ಪ್ರಾಂಶುಪಾಲರಾಗಿ ಕಾರ್ಯನಿರ್ವಹಿಸುತ್ತಿರುವ ಎದುರುದಾರರು, ಇತರೆ ಉಪನ್ಯಾಸಕರು ಹಾಗೂ ಸಂಸ್ಥೆಯ ಸಿಬ್ಬಂದಿಗಳ ಬಾಬ್ತು ವೇತನವು ಸರ್ಕಾರದಿಂದ ಕೊಡಲ್ಪಡುವುದಾಗ್ಯೂ ಕೂಡ ಸದರಿ ಸಂಸ್ಥೆಗೆ ಸರ್ಕಾರದಿಂದ ಕಟ್ಟಡ ನಿಧಿ ಅಥವಾ ಇನ್ನಿತರೆ ನಿಧಿ ಮಂಜೂರಾಗುವುದಿಲ್ಲ. ದೂರಿಗೆ ಸಂಬಂಧಿಸಿದ ಕಟ್ಟಡ ನಿರ್ಮಾಣಕ್ಕೆ ಈವರೆವಿಗೆ ತಗುಲಿದ ಒಟ್ಟು ವೆಚ್ಚ ₹2,65,00,000/- (ಎದುರುದಾರರ ಪ್ರಕಾರ) ಗಳ ಪೈಕಿ ₹1,88,62,253/-ಗಳು ಕಾಲೇಜಿನಲ್ಲಿ ಕ್ರೂಢೀಕರಣವಾದ ಹಣವಾಗಿದೆಯೆಂದು ಎದುರುದಾರರು ಹೇಳಿದ್ದಾರೆ. ಉಳಿಕೆ ಹಣ ₹76,37,747/- (₹2,65,00,000 - 1,88,62,253)ದ ಮೂಲವನ್ನು ಎದುರುದಾರರು ಎಲ್ಲಿಯೂ ತಿಳಿಸಿಲ್ಲ ಮತ್ತು ಆ ಬಗ್ಗೆ ಲೆಕ್ಕಪತ್ರವನ್ನು ನಿರ್ವಹಣೆ ಮಾಡದಿರುವುದು ಕಂಡು ಬಂದಿದೆ;

6) ಕರ್ನಾಟಕ ಶಿಕ್ಷಣ ಕಾಯಿದೆ ಕಲಂ 56 ಮತ್ತು 58ರನ್ವಯ ಅನುದಾನಿತ ಶಿಕ್ಷಣ ಸಂಸ್ಥೆಯು ಕಾಲಕಾಲಕ್ಕೆ ಅಥವಾ ಸೂಚನೆ ಅನ್ವಯ ಸೂಚಿತ \ ಸಕ್ಷಮ ಪ್ರಾಧಿಕಾರಕ್ಕೆ ಲೆಕ್ಕಪತ್ರವನ್ನು ಸಲ್ಲಿಸಬೇಕಿದೆ. ಸದರಿ ಕಾಯಿದೆಯ ಕಲಂ 51 ಈ ಕೆಳಗಿನಂತಿದೆ –

> 51. Monies received from sources other than grant.- (1) Subject to any law for the time being in force any money received by way of voluntary donation from donors may be accepted by the institution or the Governing Council and the fact shall be intimated within ninety days from the date of such acceptance to the competent authority. Such money shall be deposited in the account of the institution in such Nationalised or Scheduled Bank as may be approved by the State Government and shall be applied and expended for the improvement of the institution and the development of educational facilities and for such other purposes as may be prescribed.
>
> (2) Subject to any law for the time being in force no money shall be collected before, during or after admission of any person by any educational institution as a condition precedent to such admission except towards the prescribed fees.

Bsm/8684/15



ಸದರಿ ಕಲಂ ಅನ್ವಯ ಯಾವುದೇ ಅನುದಾನಿತ ಶಿಕ್ಷಣ ಸಂಸ್ಥೆಯು ಖಾಸಗಿ ವ್ಯಕ್ತಿ \ ಸಂಸ್ಥೆಯಿಂದ ದೇಣಿಗೆಯನ್ನು ಪಡೆದ ಪಕ್ಷದಲ್ಲಿ ನಿಗದಿತ ಸಮಯದೊಳಗೆ ಸಕ್ಷಮ ಪ್ರಾಧಿಕಾರಕ್ಕೆ ವರದಿಸ ಬೇಕಾಗಿದೆ. ಆ ರೀತಿ, ದೇಣಿಗೆ ರೂಪದಲ್ಲಿ ಸ್ವೀಕೃತವಾದ ಹಣವನ್ನು ರಾಷ್ಟ್ರೀಕೃತ ಅಥವಾ ಷೆಡ್ಯೂಲ್ಡ್ ಬ್ಯಾಂಕ್‌ನಲ್ಲಿ ಜಮಾ ಮಾಡಬೇಕು. ಹಾಗೆ ಸ್ವೀಕೃತವಾದ ಹಣವನ್ನು ಸಂಸ್ಥೆಯ ಅಭಿವೃದ್ಧಿ ಕಾರ್ಯಗಳಿಗೆ ಬಳಸಬಹುದಾಗಿದೆ. ಸದರಿ ಅಂಶಗಳನ್ನು ಪಾಲಿಸದಿದ್ದಲ್ಲಿ, ಕಾಯಿದೆಯ ಕಲಂ 128ರಡಿಯಲ್ಲಿ ಶಿಕ್ಷಿಸಲು ಅವಕಾಶವಿದೆ;

7) ಲೆಕ್ಕಪರಿಶೋಧಕರ ವರದಿ ಮತ್ತು ಎದುರುದಾರರು ತನಿಖಾಧಿಕಾರಿಗಳಿಗೆ ನೀಡಿದ ದಿನಾಂಕ:29/07/17ರ ಪತ್ರದಲ್ಲಿ ಹೇಳಲಾದ ಕಟ್ಟಡ ನಿರ್ಮಾಣದ ಖರ್ಚಿಗೂ, ಕಟ್ಟಡ ನಿರ್ಮಾಣಕ್ಕೆ ಈವರೆವಿಗೂ ಆದ ಒಟ್ಟಾರೆ ಖರ್ಚಿಗೂ ಕಂಡು ಬರುತ್ತಿರುವ ವ್ಯತ್ಯಾಸವನ್ನು ಗಮನಿಸಿದ್ದಲ್ಲಿ ಮತ್ತು ಸದರಿ ವ್ಯತ್ಯಾಸದ ಹಣದ ಬಾಬ್ತು ಲೆಕ್ಕಪತ್ರವನ್ನು ನೀಡದಿರುವುದರಿಂದ, ಸದರಿ ವ್ಯತ್ಯಾಸದ ಹಣ ವಿದ್ಯಾರ್ಥಿಗಳಿಂದ ಅಥವಾ ಬೇರೆ ಮೂಲದಿಂದ ದೇಣಿಗೆ ರೂಪದಲ್ಲಿ ಪಡೆಯಲಾಗಿದೆಯೆಂದು ಹೇಳಬಹುದು;

8) ಕಿಟಲ್ ವಿಜ್ಞಾನ ಮಹಾವಿದ್ಯಾಲಯದ 2011-12 ರಿಂದ 2015-16ರ ಸಾಲಿನ ಜಮಾ ಮತ್ತು ವೆಚ್ಚದ ತ:ಖ್ತೆಯನ್ವಯ 2010-11ನೇ ಸಾಲಿನಲ್ಲಿ ₹13,17,300-00, 2011-12ನೇ ಸಾಲಿನಲ್ಲಿ ₹17,48,500-00, 2012-13ನೇ ಸಾಲಿನಲ್ಲಿ ₹13,28,500-00, 2013-14ನೇ ಸಾಲಿನಲ್ಲಿ ₹10,71,500-00, 2014-15ನೇ ಸಾಲಿನಲ್ಲಿ ₹5,75,000-00 ಮತ್ತು 2015-16ನೇ ಸಾಲಿನಲ್ಲಿ ₹9,97,000-00 ಗಳನ್ನು ಅಭಿವೃದ್ಧಿ ಶುಲ್ಕ ಎಂದು ವಸೂಲಿ ಮಾಡಿರುವುದು ಕಂಡು ಬಂದಿದೆ. The Karnataka Educational Institutions (Classification, Regulation and Prescription of Curricula etc.,) Rules, 1995ರ ನಿಯಮ 10ರಡಿ ಮೂರು ರೀತಿಯ ಶುಲ್ಕವನ್ನು ವಿದ್ಯಾರ್ಥಿಗಳಿಂದ ಸಂಸ್ಥೆಯು ಪಾವತಿಸಿಕೊಳ್ಳಬಹುದಾಗಿದೆ. ಅವೆಂದರೆ, 1)ಅವಧಿ ಶುಲ್ಕ (Term fees), 2)ಬೋಧನಾ ಶುಲ್ಕ (Tuition fees), 3) ವಿಶೇಷ ಅಭಿವೃದ್ಧಿ ಶುಲ್ಕ (Special Development fees). ಸದರಿ ನಿಯಮದನ್ವಯ ಮಾನ್ಯತೆ ಪಡೆದ ಅನುದಾನಿತ ಶಿಕ್ಷಣ ಸಂಸ್ಥೆಯು ವಿದ್ಯಾರ್ಥಿಗಳಿಂದ ಪ್ರತಿ ವರ್ಷಕ್ಕೆ ₹500/-ಕ್ಕಿಂತ ಮೇಲ್ಪಟ್ಟು ವಿಶೇಷ ಅಭಿವೃದ್ಧಿ ಶುಲ್ಕವನ್ನು ಪಡೆಯುವಂತಿಲ್ಲ. ಸದರಿ ದೂರಿನಲ್ಲಿ ಕಿಟೆಲ್ ವಿಜ್ಞಾನ ಮಹಾವಿದ್ಯಾಲಯವು ವಿದ್ಯಾರ್ಥಿಗಳಿಂದ ₹500/-ಕ್ಕಿಂತ ಮೇಲ್ಪಟ್ಟು ವಿಶೇಷ ಅಭಿವೃದ್ಧಿ ಶುಲ್ಕವನ್ನು ಪ್ರತಿ ವರ್ಷ ಪಾವತಿಸಿಕೊಳ್ಳುತ್ತಿದೆಯೆಂದು ಹೇಳಲಾಗಿದ್ದು, ಸದರಿ ನಿಯಮ 10ರ ಉಲ್ಲಂಘನೆಯ ಬಗ್ಗೆ ಸದರಿ ನಿಯಮಾವಳಿಗಳ ನಿಯಮ, 15ರಡಿಯಲ್ಲಿ ಜಿಲ್ಲಾ ಮಟ್ಟದ ಶಿಕ್ಷಣ ನಿಯಂತ್ರಣ ಪ್ರಾಧಿಕಾರ (District Level Education Regulating Authority) ವು ವಿಚಾರಣೆ ನಡೆಸಬಹುದಾಗಿದ್ದು, ಕರ್ನಾಟಕ ಶಿಕ್ಷಣ ಕಾಯಿದೆ, ಕಲಂ 48ರ ಉಲ್ಲಂಘನೆ ಸಾಬೀತಾದಲ್ಲಿ, ಕಲಂ 124ಎ ಅಡಿ ಶಿಕ್ಷಾರ್ಹವಾಗಿದೆ;

N. Anand

9) ಕಟ್ಟಡ ಮಂಜೂರಾತಿ ನಕ್ಷೆಗೆ ವಿರುದ್ಧವಾಗಿ ಕಾಲೇಜ್ ಕಟ್ಟಡ ನಿರ್ಮಿಸಲಾಗುತ್ತಿದೆಯೆಂಬ ಆಪಾದನೆಗೆ ಸಂಬಂಧಪಟ್ಟಂತೆ, ಸಕ್ಷಮ ಪ್ರಾಧಿಕಾರವಾದ ಮಹಾನಗರ ಪಾಲಿಕೆಯು ಕೆಎಂಸಿ ಕಾಯಿದೆ ಪ್ರಕಾರ ಕ್ರಮ ತೆಗೆದುಕೊಳ್ಳಲು ಅವಕಾಶವಿದೆ;

10) ಎದುರುದಾರರು ಅನುದಾನಿತ ಖಾಸಗಿ ಶಿಕ್ಷಣ ಸಂಸ್ಥೆಯ ಪ್ರಾಂಶುಪಾಲರಾಗಿದ್ದು, ಸದರಿ ಸಂಸ್ಥೆಗೆ ಸರ್ಕಾರದಿಂದ ಕಟ್ಟಡ ಅನುದಾನ \ ನಿಧಿ ಮಂಜೂರಾಗದೇ ಇರುವುದರಿಂದ, ಸಾರ್ವಜನಿಕ ಹಣ ದುರುಪಯೋಗವಾಗುವ ಪ್ರಶ್ನೆ ಉದ್ಭವಿಸುವುದಿಲ್ಲ. ನಿಯಮಾವಳಿಗಳಡಿಯಲ್ಲಿ ನಿಗಧಿಪಡಿಸಿದ ಮಿತಿಗಿಂತ ಹೆಚ್ಚಿನ ಅಭಿವೃದ್ಧಿ ಶುಲ್ಕವನ್ನು ವಿದ್ಯಾರ್ಥಿಗಳಿಂದ ವಸೂಲಿ ಮಾಡಿದ ಬಗ್ಗೆ ಹಾಗೂ ವಿದ್ಯಾರ್ಥಿಗಳಿಂದ ಅಥವಾ ಬೇರೆ ಮೂಲದಿಂದ ದೇಣಿಗೆ ರೂಪದಲ್ಲಿ ಬಂದಿದೆಯೆಂದು ಕಂಡು ಬರುವ ಹಣದ ಲೆಕ್ಕಪತ್ರವನ್ನು ಸೂಚಿತ\ ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸದೇ ಕರ್ತವ್ಯ ಲೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ.

8. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು ಮತ್ತು ಆಕ್ಷೇಪಣೆಯನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಎದುರುದಾರರ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ ಸಮಂಜಸ/ ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

9. ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, ಎದುರುದಾರರು ಸರ್ಕಾರಿ/ ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ ದುರ್ನಡತೆ ಮೇಲ್ನೋಟಕ್ಕೆ ಕಂಡು ಬರುತ್ತದೆ.

10. ಅದಲ್ಲದೆ ಎದುರದಾರರು ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1)ರ ಅಡಿಯಲ್ಲಿ ದುರ್ನಡತೆ/ ದುರ್ವರ್ತನೆ ಕಂಡು ಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ, ಹಾಗೂ ಎದುರುದಾರರ ವಿರುದ್ಧದ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14(ಎ) ಅಡಿ ಈ ಸಂಸ್ಥೆಗೆ ವಹಿಸ ಬೇಕೆಂದು ಕೋರಿದೆ.

N. Anand

BGM/18685/15



11. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಮೂರು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

N. Anand
26/10

(ನ್ಯಾಯಾಮೂರ್ತಿ ಎನ್.ಆನಂದ)
ಉಪಲೋಕಾಯುಕ್ತ,
ಕರ್ನಾಟಕ ರಾಜ್ಯ.

26/10